# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 | ENGLISH DAILY | Subscription Yearly - Rs. - | FRIDAY | 23-6-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಸತತ 3ನೇ ದಿನ ಪಾಮೆಣ್ಣೆ ದರ ಇಳಿಕೆ

ಚಿಕಾಗೋದಲ್ಲಿ ಸೋಯಾಬೀನ್ ಎಣ್ಣೆ ದರ ಇಳಿಕೆಯ ಪ್ರಭಾವದಿಂದ ಸತತ 3 ನೇ ದಿನ ಮಲೇಶೀಯನ್ ಪಾಮೆಣ್ಣೆ ದರ 1.25 ಶೇಕಡಾ ಇಳಿಕೆಯಾಗಿ ಟನ್‌ಗೆ 3569 ರಿಂಗಿಟ್ಸ್ ($767.87) ಆಯಿತು. ನಿರೀಕ್ಷೆಗಿಂತ ಕಡಿಮೆ ಯು.ಎಸ್ ಬಯೋ ಇಂಧನ ಮ್ಯಾಂಡೇಟ್‌ನಿಂದಾಗಿ ಚಿಕಾಗೋ ಸೋಯಾಬೀನ್ ಎಣ್ಣೆ ದರ ಬೇಡಿಕೆ ಇಳಿಕೆಯೂ ಸೇರಿ 3.44 ಶೇಕಡಾ ಇಳಿಕೆ ಕಂಡಿತು.

## ಮೇ ತಿಂಗಳಲ್ಲಿ ಭಾರತದ ಎಣ್ಣೆ ಹಿಂಡಿ ರಫ್ತು ಹೆಚ್ಚಳ (2023)

ಮೇ 2023 ರಲ್ಲಿ ಭಾರತದ (ಕುಲಾಂತರಿವಲ್ಲದ) ಎಣ್ಣೆ ಹಿಂಡಿ ರಫ್ತು (NON-GM) 4.36 ಲಕ್ಷ ಟನ್‌ಗೇರಿದೆಯೆನ್ನಲಾಗಿದೆ. ಹಿಂದಿನ ವರ್ಷ ಈ ಅವಧಿಯಲ್ಲಿ ಇದು 2.54 ಲಕ್ಷ ಟನ್‌ಗಳಾಗಿತ್ತೆನ್ನಲಾಗಿದೆ. ನಾನ್ ಜಿನೆಡಿಕಲೀ ಮಾಡಿಫೈಡ್ ಹಿಂಡಿಗಳಿಗೆ ಯುರೋಪ್, ಮಧ್ಯ ಪ್ರಾಚ್ಯ ಮತ್ತು ಆಗ್ನೇಯ ಏಶಿಯಾದ ದೇಶಗಳಿಂದ ಉತ್ತಮ ಬೇಡಿಕೆಯಿದೆಯೆನ್ನಲಾಗಿದೆ. ಹಾಗೆಯೇ ಪಶ್ಚಾತ್ಯ ದೇಶಗಳಲ್ಲಿ ಯು.ಎಸ್.ಎ ಹಾಗೂ ಕೆಲವು ಯುರೋಪಿಯನ್ ರಾಷ್ಟ್ರಗಳಾಗಿವೆ. ಕೆನಡಾ, ಫ್ರಾನ್ಸ್, ನ್ಯೂಜಿಲಾಂಡ್ ಮತ್ತಿತರ ದೇಶಗಳಿಂದ ಉತ್ತಮ ಬೇಡಿಕೆಯಿದೆಯೆನ್ನಲಾಗಿದೆ. ಒಟ್ಟು ತೈಲ ಹಿಂಡಿಗಳ ರಫ್ತು (ಎಪ್ರಿಲ್,ಮೇ) 930044 ಟನ್‌ಗಳಾಗಿದ್ದು, ಹಿಂದಿನ ವರ್ಷ ಈ ಅವಧಿಯಲ್ಲಿ 586,415 ಟನ್‌ಗಳಾಗಿತ್ತೆನ್ನಲಾಗಿದೆ. ಸೋಯಾಬೀನ್ ದರ ಇಳಿಕೆಯಿಂದ ಹಿಂದಿನ ವರ್ಷಕ್ಕಿಂತ ಈ ವರ್ಷ ಸೋಯಾಬೀನ್ ಮೀಲ್ ದರ ಕಡಿಮೆಯಾಗಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳದಿಂದ ರಫ್ತು ಹೆಚ್ಚಳವಾಗಿದೆ.

## ತೆರಿಗೆ ರಹಿತ ಗೋಧಿ ಆಮದಿಗೆ ಅವಕಾಶ ಸಾಧ್ಯತೆ

ಹೆಚ್ಚಳವಾಗುತ್ತಿರುವ ಗೋಧಿ ದರ ಇಳಿಕೆಯಾಗುತ್ತಿರುವ ಆವಕದಿಂದ ಕೈಗಾರಿಕೆಗಳಿಗೆ ತೆರಿಗೆ ರಹಿತ ಗೋಧಿ ಆಮದು ಅವಕಾಶ ಲಭಿಸುವ ಸಾಧ್ಯತೆಗಳಿವೆಯೆನ್ನಲಾಗುತ್ತಿದೆ. ಮಾರುಕಟ್ಟೆಗಳಲ್ಲಿ ಹೆಚ್ಚಳವಾಗುತ್ತಿರುವ ದರ ನಿಯಂತ್ರಣಗೊಳಿಸಲು ಆಮದು ಸುಂಕ ರಹಿತ ಅವಕಾಶ ಒದಗಿಸುವ ಸಾಧ್ಯತೆ ಗಳಿವೆಯೆನ್ನಲಾಗಿದೆ.